Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 2/2014

ಫ್ರಾ.ಸಾ. 5 ಚಾ.ಸಾ. 5

| | | |
|---|---|---|
| ಹೆಸರು | : | ರಂಗಪ್ಪ |
| ತಂದೆಯ ಹೆಸರು | : | ಹೊನ್ನಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಮಾನೇಜರ ಸಮಾಜ ಕಲ್ಯಾಣ ಇಲಾಖೆ ಕಲಬುರಗಿ |
| ವಾಸ | : | ಶಹಾಪೂರ |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 07-06-2024**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು 2011 ರಿಂದ 2023ರ ವರೆಗೆ ಸಮಾಜ ಕಲ್ಯಾಣ ಇಲಾಖೆ ಯಾದಗಿರಿಯಲ್ಲಿ ಪ್ರ.ದ.ಸ. ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 15-11-2012 ರಂದು ಲೋಕಾಯುಕ್ತ ಕಛೇರಿಯವರು ನಮ್ಮ ಮೇಲಾಧಿಕಾರಿಗಳಿಗೆ ನೋಟೀಸನ್ನು ಕೊಟ್ಟಿದ್ದರು. ನನಗೆ ನಮ್ಮ ಮೇಲಾಧಿಕಾರಿಗಳು ಮೌಖಿಕವಾಗಿ ವಿಷಯ ತಿಳಿಸಿ ಲೋಕಾಯುಕ್ತ ಕಛೇರಿಗೆ ಹೋಗುವಂತೆ ತಿಳಿಸಿದರು. ರಮೇಶ ಎನ್ನುವವರು ಸಹ ಆರ್.ಟಿ.ಓ. ಕಛೇರಿಯಿಂದ ಪಂಚರಾಗಿ ಬಂದಿದ್ದರು. ನಾವು ಜಗದೀಶ ಹಂಚನಾಳ ಇನ್ಸಪೇಕ್ಟರ ಅವರನ್ನು ಬೇಟಿಯಾದೆವು. ಅವರು ಪರಸ್ಪರ ಪರಿಚಯ ಮಾಡಿಕೊಟ್ಟರು. ರಾಘವೇಂದ್ರ ಮತ್ತು ಅಣ್ಣವೀರಪ್ಪ ಅವರನ್ನು ಪರಿಚಯ ಮಾಡಿಸಿದರು ಅವರು ಕಂದಾಯ ಇಲಾಖೆಯವರು. ಅಲ್ಲಿ ಫಿರ್ಯಾದಿ ಸಹ ಇದ್ದ. ಫೋನ್ ನಲ್ಲಿ ಧ್ವನಿ ಮುದ್ರಣವಾಗಿದ್ದು ಎನ್.ಎ.ಗೆ ಸಂಬಂಧಪಟ್ಟಂತೆ 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಫಿರ್ಯಾದಿ ಡಿ.ಸಿ. ಕಛೇರಿಗೆ ಅರ್ಜಿ ಕೊಟ್ಟಿದ್ದ. ಆ ಬಗ್ಗೆ ಫೋನ್ ನಲ್ಲಿ ಮಾತುಕತೆ ಆಗಿತ್ತು. ಅವರು ಎ.ಸಿ. ಕಛೇರಿಗೆ ಸ್ಥಳ ನಿರೀಕ್ಷಣೆ ಮಾಡಿ ವರದಿ ಕೊಡುವ ಸಲುವಾಗಿ ಆದೇಶ ಮಾಡಿ ಕಳುಹಿಸಿದ್ದರು. ಡಿ.ಸಿ. ಕಛೇರಿಯ ಮಾನೇಜರ ಅವರು 25,000/- ರೂಪಾಯಿ ಲಂಚ ಕೇಳಿದ್ದಾಗಿ ಸಂಭಾಷಣೆ ಇತ್ತು. ವಿ.ಎ. ಅವರು ಗುರುಪಾದಪ್ಪ ಮತ್ತು ಮೇಲಾಧಿಕಾರಿಗಳಿಗೆ 25,000/- ರೂಪಾಯಿ ಲಂಚ ಕೊಡಬೇಕಾಗುತ್ತದೆ ಎಂದು ಹೇಳಿದ. ಈ ಬಗ್ಗೆ

ಧ್ವನಿಮುದ್ರಣ ಇತ್ತು. ಆ ಸಮಯದಲ್ಲಿ ರಾಘವೇಂದ್ರ ಮತ್ತು ಅಣ್ಣವೀರಪ್ಪ ಇವರು ಎ.ಸಿ. ಕಛೇರಿ ಇಂದ ಬಂದಿದ್ದರು. ಅವರು ಆ ಧ್ವನಿಗಳನ್ನು ವಿ.ಎ. ಮತ್ತು ಗುರುಪಾದಪ್ಪ ಅವರ ಧ್ವನಿಗಳು ಎಂದು ಗುರುತಿಸಿದರು. ಅಲ್ಲಿ 3 ಸಿ.ಡಿ.ಗಳನ್ನು ತಯಾರಿಸಿದರು. ಮೊದಲನೇ ಸಿ.ಡಿ.ಯಲ್ಲಿ 30,000/- ರೂಪಾಯಿ ಕೊಡಬೇಕು ಆದರೆ ನಾನೇ 25,000/- ರೂಪಾಯಿಗೆ ಒಪ್ಪಿಸಿದ್ದೇನೆ ಎಂದು ಧ್ವನಿ ಮುದ್ರಣಆಗಿತ್ತು ಗುರುಪಾದಪ್ಪನಿಗೆ ವಿ.ಎ. ಹೇಳಿದ್ದರು. 2 ನೇ ಸಿ.ಡಿ.ಯಲ್ಲಿ ಗುರುಪಾದಪ್ಪ ಅವರು ಡಿ.ಸಿ. ಕಛೇರಿಯಿಂದ ಕಡತ ತರಿಸಿ ನೋಡಿ ವರದಿ ಸಲ್ಲಿಸುತ್ತೇವೆ ಎಂದು ಹೇಳಿದರು. ಈ ವಿಷಯವನ್ನು ಫಿರ್ಯಾಧಿಗೆ ಹೇಳಿದರು. 3 ನೇ ಸಿ.ಡಿ.ಯಲ್ಲಿ ಇದ್ದ ವಿಷಯ ನನಗೆ ನೆನಪಿಲ್ಲ. ಈ ಧ್ವನಿಗಳನ್ನು ಪಂಚ ಸಾಕ್ಷಿದಾರರು ಗುರುತಿಸಿದರು. ಸದರಿ ಸಿ.ಡಿ.ಗಳನ್ನು ಕವರನಲ್ಲಿ ಇಟ್ಟು ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದರು. ಈ ಎಲ್ಲ ವಿಷಯದ ಬಗ್ಗೆ ದಿಃ 15.11.2012 ರಂದು ಮಧ್ಯಾಹ್ನ 12-00 ರಿಂದ 2-00 ಗಂಟೆಯವರೆಗೆ ಲೋಕಾಯುಕ್ತ ಕಛೇರಿಯಲ್ಲಿ ನಡೆಯಿತು. ಈ ಬಗ್ಗೆ ಪೊಲೀಸರು ಟೈಪ ಮಾಡಿದ್ದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ 3 ಸಿ.ಡಿ.ಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ರಿಂದ 3 ಎಂದು ಗುರುತಿಸಲಾಗಿದೆ. ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.30(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಸಿ.ಎಸ್.ಎಮ್. ವಕೀಲರಿಂದ</u>

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.